(6ನೇ ಪುಟದಿಂದ)
ಮೂಲಕವೆ ಪ್ರಸ್ತುತ ಪಡಿಸಬೇಕಾಗಿರುವಾಗ ಗಣೇಶನ ಸೊಂಡಿಲು ಹಾಗೂ ಮೊರದಗಲ ಕಿವಿಗಳ ಆಧಾರದಲ್ಲಿ ಹೇಗೆ ಬೇಕಾದರೂ ರೂಪಿಸಬಲ್ಲ ಸ್ವಾತಂತ್ರ್ಯ ನವ್ಯ ಕಲಾವಿದರಿಗಿದೆ. ಆತನ ಸೊಂಡಿಲೊಂದೇ ಸಾಕು ಗಜಾನನ ಎಂದು ಹೇಳಲು. ಅದೊಂದು ಜಗತ್ಪ್ರಸಿದ್ಧ ಐಕಾನ್ ಎಂಬುದು ಕೆಲವರ ಅಭಿಪ್ರಾಯ.

ಚಿತ್ರದ ನಡುವೆ ಸೊಂಡಿಲೊಂದು ಪ್ರತ್ಯಕ್ಷವಾಗಿಬಿಟ್ಟರೆ ಅದು ಗಣೇಶನೇ ಎಂಬುದನ್ನು ಸ್ಪಷ್ಟ ಪಡಿಸಿಬಿಡುತ್ತದೆ. ಸಂಪ್ರದಾಯವು ಹಾಕಿಕೊಟ್ಟ ಕಟ್ಟುಪಾಡಿನ ಹಂಗಿನಿಂದ ಹೊರಬಂದಿರುವ ನವ್ಯ ಗಣೇಶನ ಚಿತ್ರಗಳಿಗೆ ಧಾರ್ಮಿಕ ಆಯಾಮಕ್ಕಿಂತ ಹೆಚ್ಚಾಗಿ ಅಲಂಕಾರಿಕ ಗುಣಗಳಿವೆ. ಮನೆಗಳಲ್ಲಾಗಲಿ ಕಛೇರಿಗಳಲ್ಲಾಗಲಿ ನವ್ಯ ಶೈಲಿಯ ಗಣೇಶನ ವರ್ಣ ಚಿತ್ರವನ್ನು ತೂಗು ಹಾಕಿದ್ದರೆ ಅದೊಂದು ಒಳ್ಳೆಯ ಅಲಂಕಾರಿಕ ವಸ್ತುವಾಗಿ ಗಮನ ಸೆಳೆಯಬಲ್ಲದು.

ಕಲೆಯ ಬಗ್ಗೆ ವ್ಯಾಮೋಹ ಹಾಗೂ ವಾಸ್ತು ನಂಬಿಕೆ ಎರಡೂ ಇರುವವರಿಗೆ ಅಮೂರ್ತ ಗಣೇಶನ ಚಿತ್ರಗಳು ಬಹಳ ಪ್ರಿಯ. ಅದರಲ್ಲಿ ಉಪಯೋಗವಾಗುವ ಗಾಢ ವರ್ಣಗಳು ದೈವಿಕ ಶಕ್ತಿಯನ್ನು ಪ್ರತಿಬಿಂಬಿಸುತ್ತವೆ ಎಂಬ ನಂಬಿಕೆ ಇದೆ. ಅದಿದ್ದ ಕಡೆಯಲ್ಲಿ ದೈವಿಕ ಶಕ್ತಿ ಜಾಗೃತವಾಗಿ ಒಳ್ಳೆಯದಾಗುತ್ತದೆಂಬ ನಂಬಿಕೆಯಲ್ಲಿ 'ಅಬ್‌ಸ್ಟ್ರಾಕ್ಟ್ ಗಣೇಶ'ನ ಚಿತ್ರಗಳನ್ನು ಮನೆಗಳ ಗೋಡೆಗಳ ಮೇಲೆ ಟೇಬಲ್‌ಗಳ ಮೇಲೆ ಇಟ್ಟುಕೊಳ್ಳುತ್ತಾರೆ. ಉಡುಗೊರೆ ಕೊಡಲೂ ಇಂತಹ ಕಲಾಕೃತಿಗಳು ಉಪಯೋಗಕ್ಕೆ ಬರುತ್ತವೆ. ಈ ಕಾರಣದಿಂದಾಗಿಯೆ ನವ್ಯ ಗಣೇಶನ ಚಿತ್ರಗಳು ಚಿಕ್ಕ ಪೋಸ್ಟ್‌ಕಾರ್ಡ್ ಅಳತೆಯಿಂದ ಹಿಡಿದು ದೊಡ್ಡ ಕ್ಯಾನ್ವಾಸಿನಲ್ಲೂ ಚಿತ್ರಿತವಾಗುತ್ತವೆ.







## ಕಲಾವಿದ ಶೇಖರ್ ಬಳ್ಳಾರಿ

ಈ ಲೇಖನಕ್ಕೆ ಚಿತ್ರಗಳನ್ನು ಒದಗಿಸಿದವರು ನಮ್ಮ ನಡುವಿನ ಬಹುಮುಖ್ಯ ಕಲಾವಿದರಲ್ಲೊಬ್ಬರಾದ ಶೇಖರ್ ಬಳ್ಳಾರಿ. ನಮ್ಮ ನಡುವಿನ ಹಲವಾರು ಕಲಾವಿದರು ಅಮೂರ್ತ ಶೈಲಿಯಲ್ಲಿ ಗಣೇಶನನ್ನು ಚಿತ್ರಿಸುತ್ತಿದ್ದಾರೆ. ಅಂತಹ ಕಲಾವಿದರಲ್ಲಿ ಶೇಖರ್ ಬಳ್ಳಾರಿಯವರ ಚಿತ್ರಗಳು ಗಮನ ಸೆಳೆಯುತ್ತವೆ. ಮೂಲತಃ ಹುಬ್ಬಳ್ಳಿಯವರಾದ ಶೇಖರ್ ಆರ್ಟ್ ಮಾಸ್ಟರ್ ಮತ್ತು ಬ್ಯಾಚೆಲರ್ ಇನ್ ಫೈನ್ ಆರ್ಟ್ಸ್ ನಲ್ಲಿ ಪದವಿ ಪಡೆದಿದ್ದಾರೆ. ಹಲವಾರು ಆರ್ಟ್ ಕ್ಯಾಂಪ್‌ಗಳಲ್ಲಿ ಮತ್ತು ಚಿತ್ರ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಅಪಾರ ಅನುಭವವನ್ನು ಸಂಪಾದಿಸಿದ್ದಾರೆ. ಹಲವು ಪ್ರಶಸ್ತಿಗಳನ್ನೂ ಮುಡಿಗೇರಿಸಿಕೊಂಡಿದ್ದಾರೆ.

ಗಣೇಶನ ಚಿತ್ರಗಳು ಇವರಿಗೊಂದು ಮೋಹ. ಚಿಕ್ಕಂದಿನಿಂದಲೂ ಗಣೇಶನ ಬಗ್ಗೆ ಒಲವು ಬೆಳೆಸಿಕೊಂಡಿದ್ದ ಇವರು ಆರನೆ ತರಗತಿಯಲ್ಲಿದ್ದಾಗಲೆ ಗಣಪತಿ ಇವರ ಚಿತ್ರಗಳಿಗೆ ಒಂದು ವಸ್ತುವಾಗಿದ್ದ. ಗಣಪತಿ ಹಬ್ಬಗಳಲ್ಲಿ ಸ್ಟೇಜ್ ಡೆಕೋರೇಶನ್‌ನಲ್ಲಿ ಆಸಕ್ತಿ ಹೊಂದಿದ್ದ ಕಾರಣದಿಂದ ಗಣಪತಿಯ ಮೇಲೆ ಆಸಕ್ತಿ ಹೆಚ್ಚಾಯಿತು. 'ಗಣೇಶನ ಚಿತ್ರಣದಲ್ಲಿ ಹಲವಾರು ಪ್ರಯೋಗಗಳಿಗೆ ಅವಕಾಶವಿದೆ' ಎನ್ನುವ ಇವರು, ತಮ್ಮ ಚಿತ್ರಗಳಲ್ಲೂ ಅಂತಹ ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಅಬ್‌ಸ್ಟ್ರಾಕ್ಟ್ ಗಣೇಶ ಅಲ್ಲದೆ ಹಲವಾರು ರಿಯಲಿಸ್ಟಿಕ್ ಗಣಪತಿಯ ಚಿತ್ರಗಳನ್ನೂ ರಚಿಸಿರುವ ಇವರ ಚಿತ್ರಗಳಲ್ಲಿನ ಗಾಢವರ್ಣ ಮತ್ತು ಬ್ರಶ್ ಸ್ಟ್ರೋಕ್ಸ್ ಗಮನ ಸೆಳೆಯುತ್ತವೆ.